ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಇದಕ್ಕಾಗಿ ಎಷ್ಟು ಹಣವನ್ನು ವಿನಿಯೋಗ ಮಾಡಿದ್ದಾರೆ ಎಂಬುದನ್ನು ಇಲ್ಲಿ ಹೇಳಿಲ್ಲ. ಅದನ್ನು ದಯವಿಟ್ಟು ಹೇಳಬೇಕು.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಸ್ವಾಮಿ, ಶಿರಾ ತಾಲ್ಲೂಕಿನ ಬಂದಕುಂಟೆ ವಿಲೇಜ್‌ನಲ್ಲಿರುವ ಉನ್ನತ ಪ್ರಾಥಮಿಕ ಶಾಲೆಯಲ್ಲಿ ೭ ಕ್ಲಾಸಸ್ ಮತ್ತು ೩ ಸ್ಕೂಲ್ ರೂಮ್ಸ್ ಇದೆ. ಇದರಲ್ಲಿ ೨ ಕೊಠಡಿಗಳು ಬಿದ್ದುಹೋಗಿದೆ ಎಂಬುದನ್ನು ನಾವು ಒಪ್ಪಿಕೊಂಡಿದ್ದೇವೆ. ಒಂದು ಸ್ಕೂಲ್ ರೂಮಿಗೆ ೧೫೦೦ ರೂಪಾಯಿಗಳ ವೆಚ್ಚದಲ್ಲಿ ಅದರ ರಿಪೇರಿ ಕೆಲಸ ಮುಗಿದಿದೆ. ಮತ್ತೊಂದು ಸ್ಕೂಲ್ ರೂಮಿಗೆ ಅಂದಾಜು ವೆಚ್ಚ ೬ ಸಾವಿರ ಆಗಿದ್ದು, ಇದರ ಬಗ್ಗೆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಟಿ.ಪಿ.ಯವರಿಗೆ ಸರ್ಕಾರ ಆದೇಶ ನೀಡಿದೆ.

ಶ್ರೀ ಎಸ್. ಲಿಂಗಯ್ಯ.—ಸ್ವಾಮಿ, ಇನ್ನುಪರಿವಿಗೂ ತಾಲ್ಲೂಕು ಅಭಿವೃದ್ಧಿ ಮಂಡಳಿ ಶಾಲಾ ಕಟ್ಟಡ ದುರಸ್ತಿಗಾಗಿ ೯೦೦ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಅವಕಾಶ ಇತ್ತು. ಜಿಲ್ಲಾಧಿಕಾರಿಯವರು ೧೫೦೦ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಅವಕಾಶ ಇತ್ತು. ಇವತ್ತಿನ ದಿನಸ ಈ ಹಣ ಏನೇನೂ ಸಾಕಾಗುವುದಿಲ್ಲ. ಆದರೂ ಕೂಡ ಜಿಲ್ಲಾಧಿಕಾರಿಯವರಿಂದ ಮಂಜೂರಾತಿ ಪಡೆದು ೧೫೦೦ ರೂಪಾಯಿ ಎಸ್ಟಿಮೇಟ್ ಮಾಡಿ ಕೆಲಸ ಮಾಡಿದ್ದಾರೆಂದು ನಾನು ತಿಳಿದು ಕೊಂಡಿದ್ದೇನೆ. ಈ ಸಂದರ್ಭದಲ್ಲಿ ನನ್ನ ಒಂದು ಸಲಹೆ ಏನೆಂದರೆ, ಇವತ್ತಿನ ದಿನಸ ಒಂದು ಶಾಲಾ ಕಟ್ಟಡಕ್ಕೆ ೯-೧೦ ಸಾವಿರ ರೂಪಾಯಿಗಳ ಮೇಲೆ ಖರ್ಚಾಗುತ್ತದೆ. ಆ ದೃಷ್ಟಿಯಿಂದ ತಾಲ್ಲೂಕು ಅಭಿವೃದ್ಧಿ ಮಂಡಳಿ ೪೫೦೦ ರೂಪಾಯಿ ಖರ್ಚು ಮಾಡುವುದಕ್ಕೆ ಅಧಿಕಾರವನ್ನು ಮತ್ತು ಜಿಲ್ಲಾಧಿಕಾರಿಯವರು ೩೦೦೦ ರೂಪಾಯಿ ಮಂಜೂರು ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತೀರೆಂದು ಕೇಳಿಬಯಸುತ್ತೇನೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ತಾವು ಹೇಳಿದ ವಿಷಯವನ್ನು ಗಮನದಲ್ಲಿಟ್ಟು ಕೊಳ್ಳುತ್ತೇವೆ. ಈ ಕಟ್ಟಡವನ್ನು ಸ್ಪೆಷಲ್ ರಿಪೇರ್ಸ್ ಮೇಲೆ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ.

Creation of 20 posts of District Inspecting Assistants

66 PROF. S. S. ARAKERI (Balloli).—Will the Minister for Finance and Tourism be pleased to state.—

(a) whether it is a fact that the proposal for creating 20 posts of District Inspecting Assistants in the Department of Backward Classes and Minorities is pending with the Finance Department since the last one year;

(b) whether it is a fact that the works relating to uplift of Backward Classss and religious Minorities are at a stand-still for want of these officers;

(c) if so, whether Goverament will move fast to sanction these posts ?

SRI M. VEERAPPA MOILY (Minister for Finance and Tourism).—

(a) No.

(b) No.

(c) Government will take appropriate action on need based priority.

ಶ್ರೀ ಎಂ. ಗಂಗಣ್ಣ (ಶ್ರೀ ಎಸ್. ಎಸ್. ಆರಕೇರಿ ಪರವಾಗಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನಿರೀಕ್ಷಣಾ ಸಹಾಯಕ ಅವಶ್ಯಕತೆ ಕಂಡುಬಂದಿಲ್ಲವೆಂದು ಹೇಳಿದ್ದಾರೆ, ಜಿಲ್ಲಾ ಸಮಾಜ ಕಲ್ಯಾಣ

ಇಲಾಖೆಗೆ ಹೊಂದಿಕೊಂಡಂತೆ ಒಬ್ಬರಿದ್ದಾರೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅವಶ್ಯಕತೆ ಮೇಲೆ ಈ ಹುದ್ದೆಗಳನ್ನು ಏತಕ್ಕೆ ಮಾಡಬಾರದು ?

ಶ್ರೀ ಎಂ. ವೀರಪ್ಪಮೊಯ್ಲಿ.—ಸಾಮಾನ್ಯ ಅಧ್ಯಕ್ಷರೇ, ನಿರೀಕ್ಷಣಾ ಅಧಿಕಾರಿಗಳನ್ನು ಮಾಡ ಬಾರದು ಎನ್ನುವುದು ಸರ್ಕಾರದ ಉದ್ದೇಶವಲ್ಲ. ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ಸಮಾಜ ಕಲ್ಯಾಣ ಇಲಾಖೆ ಹಾಗೂ ಮಕ್ಕಳ ಕಲ್ಯಾಣ ಇಲಾಖೆಗೆ ಸೇರಿದಂತೆ ಒಬ್ಬರು ನಿರೀಕ್ಷಣಾ ಅಧಿಕಾರಿ ಇದ್ದರೆ ಸಾಕು. ಪ್ರತಿಯೊಂದು ಇಲಾಖೆಗೂ ಒಬ್ಬೊಬ್ಬರನ್ನು ಮಾಡುವುದರಿಂದ ಅನಾವಶ್ಯಕ ಖರ್ಚಾ ಗುತ್ತೆ. ಸಾಕಷ್ಟು ಕೆಲಸ ಒಂದೊಂದೇ ಇಲಾಖೆಯಲ್ಲಿ ಇರುವುದಿಲ್ಲ. ಕೆಲಸದ ಒತ್ತಡವನ್ನು ನೋಡಿ ಕೊಂಡು ತಾಲ್ಲೂಕು ಲೆವಲಿನಲ್ಲಿ ಮಾಡೋಣ. ಇದರ ಬಗ್ಗೆ ಪರಿಶೀಲನೆ ಮಾಡಿ ಕಳುಹಿಸಿ ಎಂದು ಬರೆಯಲಾಗಿದೆ.

ಶ್ರೀ ಎಂ. ಗಂಗಣ್ಣ.—ಹಿಂದುಳಿದ ವರ್ಗಗಳ ಡೈರೆಕ್ಟರ್ ಬಂದ ಮೇಲೆ ಎಷ್ಟೋ ಹಾಸ್ಟೆಲು ಗಳು ಬಂದಿವೆ. ವಿದ್ಯಾರ್ಥಿ ವೇತನಕ್ಕೆ, ಫೀಷಿಪ್‌ಗೆ ಸಂಬಂಧಪಟ್ಟಂತೆ ಸಾಕಷ್ಟು ಕೆಲಸ ಇದೆ ಈ ವಿಚಾರ ಜಿಲ್ಲಾ ಕಮಿಟಿಗಳನ್ನು ಮಾಡಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲಿಯೂ ಕೂಡ ಕೆಲಸದ ಹೊರೆ ಜಾಸ್ತಿ ಇದೆ. ಆದ್ದರಿಂದ ೨೦ ಹುದ್ದೆಗಳನ್ನು ಮಂಜೂರು ಮಾಡುತ್ತೀರಾ ?

ಶ್ರೀ ಎಂ. ವೀರಪ್ಪಮೊಯ್ಲಿ.—ಇದು ನಿರೀಕ್ಷಣಾ ಸಹಾಯಕರ ಹುದ್ದೆಗಳಿಗೆ ಸೇರಿದ ವಿಚಾರ. ಎಲ್ಲಾ ಇಲಾಖೆಗಳನ್ನು ಪೂಲ್ ಮಾಡಿಕೊಂಡು ಒಂದು ಹುದ್ದೆ ಇದ್ದರೆ ಸಾಕೆಂದು ಸರ್ಕಾರ ಭಾವಿಸಿದೆ. ಬೇರೆ ಬೇರೆ ಇಲಾಖೆಗೆ ಒಬೊಬ್ಬರನ್ನು ನೇಮಕ ಮಾಡುವ ಅಗತ್ಯವಿಲ್ಲ ಎನ್ನುವ ಶಂಕೆಯನ್ನು ವ್ಯಕ್ತ ಪಡಿಸಿದ್ದೇವೆ. ಅಗತ್ಯ ಇದ್ದರೆ ಮಾಡೋಣ.

Held over Question from 4th List

Implementation of Compulsory Education Programme in the State.

352 SRI C. RUDRAPPA (Sandur).—Will the Minister of State for Primary and Secondary Education be pleased to state.—

(a) whether the Government is serious about implementing Compulsory Education Programme for the Children in the age group between 6-11 in the State,

(b) if so, the steps taken to provide more school buildings particularly in rural parts and also to recruit more number of teachers to cope with the work;

(c) whether any arrangement with the co-operation of primary school teachers and the betterment committees have been made to prepare statistics about school going children in each village every year to successfully implement this programme as also the adult education scheme;

(d) the amount provided in the current year's budget (*i.e.* 1980-81) for these programmes ?

SMT. NAGAMMA C. KESAVAMURTHY (Minister of State for Primary and Secondary education).—

(a) Yes (for the age group of 6-10 years).

(b) Necessary provisions are being made for implementing both the programme.